# ಮುಲಕನಾಡು ಮಹಾಸಂಘ (ರಿ.)

(ನೋಂದಣಿ ಸಂಖ್ಯೆ : 756:1995–1996)

512, 42ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು–560 041.

## 12ನೇ ಸರ್ವಸದಸ್ಯರ ಸಭೆ

21–09–2014 ಭಾನುವಾರ

2013–14ನೇ ಸಾಲಿನ

ಆಡಳಿತ ಮಂಡಳಿ ವರದಿ

# ಮುಲಕನಾಡು ಮಹಾಸಂಘ (ರಿ.)

(ನೋಂದಣಿ ಸಂಖ್ಯೆ : 756:1995–1996)

512, 42ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು–560 041.

## ಆಡಳಿತ ಮಂಡಳಿಯ ಸದಸ್ಯರು

| | |
|---|---|
| ಗೌರವ ಅಧ್ಯಕ್ಷರು | ಡಾ. ಎಂ.ಕೆ.ಎಲ್.ಎನ್. ಶಾಸ್ತ್ರಿ |
| ಅಧ್ಯಕ್ಷರು | ಶ್ರೀ ಬಿ.ಎಲ್. ನಾಗೇಂದ್ರಪ್ರಸಾದ್ |
| ಉಪಾಧ್ಯಕ್ಷರು | ಶ್ರೀ ಎ.ವಿ. ರಾಮಮೂರ್ತಿ<br>ಶ್ರೀ ವೈ.ಎನ್. ಶರ್ಮ |
| ಕಾರ್ಯದರ್ಶಿಗಳು | ಶ್ರೀ ಬಿ.ಆರ್. ರವಿ |
| ಜಂಟಿಕಾರ್ಯದರ್ಶಿಗಳು | ಶ್ರೀ ನರಸಿಂಹ ಶಾಸ್ತ್ರಿ |
| ಕೋಶಾಧ್ಯಕ್ಷರು | ಶ್ರೀ ಮಹೇಶ್ ಕುಮಾರ್ |
| ಸದಸ್ಯರು | ಶ್ರೀ ಎಸ್.ಆರ್. ಕೃಷ್ಣಮೂರ್ತಿ<br>ಶ್ರೀ ಕೆ. ಕೃಷ್ಣಮೂರ್ತಿ<br>ಶ್ರೀ ಎಸ್.ವಿ. ರಮೇಶ್<br>ಶ್ರೀ ಸಿ. ಪ್ರಕಾಶ್<br>ಡಾ॥ ನಾಗಲಕ್ಷ್ಮಿ<br>ಶ್ರೀ ವೆಂಕಟರಮಣಯ್ಯ<br>ಶ್ರೀ ಸುರೇಶ್<br>ಶ್ರೀ ನಾಗರಾಜ್<br>ಶ್ರೀ ಎಸ್. ಮುರಳಿಧರ್ |

# ಮುಲಕನಾಡು ಮಹಾಸಂಘ (ರಿ.)

(ನೋಂದಣಿ ಸಂಖ್ಯೆ : 756:1995–1996)

512, 42ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು–560 041.

ದಿನಾಂಕ : 18ನೇ ಆಗಸ್ಟ್ 2013
ಸ್ಥಳ : ಗೀರ್ವಾಣ ವಿಧ್ಯಾಭವನ
ನಂ. 1835/ಎ, 34ನೇ ಅಡ್ಡರಸ್ತೆ,
9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ
ಬೆಂಗಳೂರು 560070
ಸಮಯ: ಸಾಯಂಕಾಲ 3–30
ಹಾಜರಿದ್ದ ಸದಸ್ಯರ ಸಂಖ್ಯೆ : 53

ನಿಗದಿತ ಸದಸ್ಯರ ಸಮೂಹದ ಹಾಜರಾತಿ ಇಲ್ಲದ ಕಾರಣ ಸರ್ವ ಸದಸ್ಯರ ಸಭೆಯನ್ನು ಸಂಜೆ 3.30 ಗಂಟೆ ಬದಲು ಸಂಜೆ 3–45 ಗಂಟೆಗೆ ಮುಂದೂಡಲು ಸರ್ವಸದಸ್ಯರ ಅಂಗೀಕಾರದಿಂದ ಸಂಜೆ ಸಭೆಯನ್ನು ಸಂಪ್ರದಾಯಿಕವಾಗ 30 ನಿಮಿಷ ಮುಂದೂಡುವ ಬದಲು ಸಭೆ ಸಂಜೆ 3–45 ಗಂಟೆಗೆ ಪ್ರಾರಂಭವಾಯಿತು.

1. ಶ್ರೀ ಕೃಷ್ಣಮೂರ್ತಿಯವರ ಪ್ರಾಥನೆಯಿಂದ ಸರ್ವಸದಸ್ಯರ ಸಭೆ ಪ್ರಾರಂಭವಾಯಿತು.

2. ಅಧ್ಯಕ್ಷರು ಸಭೆಗೆ ಎಲ್ಲಾ ಸದಸ್ಯರಿಗೆ ಆಹ್ವಾನ ನೀಡಿ ತಮಗೆ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಿಗೆ, ತಮ್ಮ ಅವಧಿಯಲ್ಲಿ ನೀಡಿದ ಸಹಾಕಾರಕ್ಕೆ ಕೃತಜ್ಞತೆಗಳನ್ನು ಅರ್ಪಿಸಿದರು ತಮ್ಮ ಭಾಷಣದಲ್ಲಿ ಹೆಚ್ಚು ಹೆಚ್ಚಾಗಿ ಸದಸ್ಯರನ್ನು ನೋಂದಾಯಿಸಲು ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಧಾರಾಳವಾಗಿ ಸಹಾಯವನ್ನು ನೀಡಬೇಕೆಂದು ಕೋರಿದರು. ಮತ್ತು ಸದಸ್ಯರ ನೋಂದಾವಣಿ ಕಾರ್ಯಕ್ರಮ ನಿರೀಕ್ಷಿತ ಮಟ್ಟಕ್ಕೆ ಇಲ್ಲದಿರುವ ವಿಷಯವನ್ನು ಪ್ರಸ್ತಾಪಿಸಿದರು.

3. 2013ರ ವರೆಗೆ ಅಗಲಿದ ಸದಸ್ಯರುಗಳಿಗೆ ಸಂತಾಪ ಸೂಚನೆಯನ್ನು ಆಡಳಿತ ಮಂಡಳಿ ಕಾರ್ಯದರ್ಶಿಗಳು ಮಂಡಿಸಿ. ಒಂದು ನಿಮಿಷ ಮೌನವನ್ನು ಆಚರಿಸಿ, ಅಗಲಿದ ಮಹನೀಯರ ಆತ್ಮಗಳಿಗೆ ಶಾಂತಿಯನ್ನು ಕೋರಿ, ಅವರ ಕುಟುಂಬಗಳಿಗೆ ಆದ ತುಂಬಲಾರದ ನಷ್ಟವನ್ನು ಭರಿಸಲು ಶಕ್ತಿಯನ್ನು ನೀಡಬೇಕೆಂದು ಪ್ರಾರ್ಥಿಸಿದರು.

4. ಕಾರ್ಯದರ್ಶಿಗಳು 2011–12, ಮತ್ತು 2012–13ನೇ ಸಾಲಿನ ಸೂಚನೆ ಪತ್ರವನ್ನು ಮಂಡಿಸಿ ಸರ್ವ ಸದಸ್ಯರ ಒಪ್ಪಿಗೆಯನ್ನು ಪಡೆಯಲಾಯಿತು.

ಮಂಡಿಸಿದವರು : ಶ್ರೀ ವೆಂಕಟರಮಣಯ್ಯ

ಅನುಮೋದಿಸಿದವರು : ಶ್ರೀ ಅಶ್ವತ್ಥ ನಾರಾಯಣ.

5. ದಿನಾಂಕ : 30–01–2011 ರಂದು ನಡೆದ 10ನೇ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಕಾರ್ಯದರ್ಶಿಗಳು ಓದಿ ದಾಖಲು ಮಾಡಿದರು ಮತ್ತು ವಿಷಯ ಸೂಚನೆಯನ್ನು ಮತ್ತು ಅಂಗೀಕರಿಸುವಂತೆ ಶ್ರೀ ಸುರೇಶ್ ರವರು ಮಂಡಿಸಿದರು ಮತ್ತು ಅದನ್ನು ಶ್ರೀ ನರಸಿಂಹ ಶಾಸ್ತ್ರಿಯವರು ಅನುಮೋದಿಸಿದರು.

6. 2011–12 ಮತ್ತು 2012–13 ರ ಆಡಳಿತ ಮಂಡಳಿಯ ವರದಿಯನ್ನು ಕಾರ್ಯದರ್ಶಿಗಳು ಓದಿ ದಾಖಲು ಮಾಡಿದರು. ವಿಷಯ ಸೂಚನೆಯನ್ನು ಅಂಗೀಕರಿಸುವಂತೆ ಶ್ರೀ ಸುರೇಶ್‌ರವರು ಮಂಡಿಸಿ ಮತ್ತು ಅದನ್ನು ಶ್ರೀ ನರಸಿಂಹ ಶಾಸ್ತ್ರಿಗಳು ಅನುಮೋದಿಸಿದರು.

7. 2011–12 ಮತ್ತು 2012–13 ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ವರದಿಯನ್ನು ಅನುಮತಿಗಾಗಿ ಕಾರ್ಯದರ್ಶಿಗಳು ಮಂಡಿಸಿದರು. ವರದಿಯನ್ನು ಅಂಗೀಕರಿಸುವಂತೆ ಶ್ರೀ ವೈ.ಎನ್. ಶರ್ಮರವರು ಮಂಡಿಸಿದರು ಮತ್ತು ಅದನ್ನು ಶ್ರೀ ವೆಂಕಟರ ಮಣಯ್ಯನವರು ಅನುಮೋದಿಸಿದರು.

8. 2013–14 ರ ಸಾಲಿನ ಆಯವ್ಯಯ ಪಟ್ಟಿಯನ್ನು ಸದಸ್ಯರ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದರು. ನೂತನ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬಂದಿರುವುದರಿಂದ ಈಗಿರುವ ಆಡಳಿತ ಮಂಡಳಿ, ಅನುಮೋದನೆಗೆ ಮಂಡಿಸಲು ಅರ್ಹತೆ ಇಲ್ಲದಿರುವುದರಿಂದ, ಹೊಸ ಆಡಳಿತ ಮಂಡಳಿಗೆ ಅನುಮೋದನೆ ಪಡೆಯಲು ಬಿಡಬೇಕೆಂದು ತಿಳಿಸಿದರು.

ಈ ವಿಷಯವನ್ನು ಶ್ರೀ ನಾಗೇಂದ್ರ ರವರು ಮಂಡಿಸಿದರು ಮತ್ತು ಶ್ರೀ ವೆಂಕಟರಮಣಯ್ಯ ನವರು ಅನುಮೋದಿಸಿದರು

ಶ್ರೀ ರಾಮಕೃಷ್ಣ ಶಾಸ್ತ್ರಿ ಎಚ್.ಎಸ್.
ಕಾರ್ಯದರ್ಶಿ

ಎಸ್.ಆರ್.ಸತ್ಯನಾರಾಯಣ
ಅಧ್ಯಕ್ಷರು

## ಸದಸ್ಯರ ಸಲಹೆಗಳು

1. ಶ್ರೀಯುತ ವೈ.ಎನ್. ಶರ್ಮ ಅವರು ಸಂಘದ ಹಿಂದಿನ ಹಾಗೂ ಪ್ರಸಕ್ತ ವರ್ಷದ ಸದಸ್ಯರ ವಿವರಗಳನ್ನು ಪ್ರತ್ಯೇಕವಾಗಿ ಮಹಾ ಶ್ರೇಷ್ಠ ದಾನಿಗಳು, ಶ್ರೇಷ್ಠ ದಾನಿಗಳು, ದಾನಿಗಳು, ಮಹಾ ಪೋಷಕರು, ಹಿತೈಷಿಗಳು ಮತ್ತು ಅಜೀವ ಸದಸ್ಯರುಗಳನ್ನು ಒಳಗೊಂಡಂತೆ ಒಂದು ವರದಿಯನ್ನು ಪ್ರಕಟಿಸಬೇಕೆಂದು ಸಲಹೆ ನೀಡಿರುತ್ತಾರೆ. ಹಾಗೆಯೇ ವರ್ಷದಲ್ಲಿ ಎಷ್ಟು ಬಾರಿ ಕಾರ್ಯಕಾರಿ ಸಮಿತಿಯು ಸಭೆಯನ್ನು ನಡೆಸಿರುವುದರ ವರದಿಯನ್ನು ಸಹ ಪ್ರಕಟಿಸಬೇಕು ಎಂಬ ಸಲಹೆ ನೀಡಿರುತ್ತಾರೆ.

2. ಶ್ರೀಯುತ ನಾಗರಾಜ್ ಅವರು ಕಾರ್ಯಕಾರಿ ಸಮಿತಿಗೆ ಯುವ ಪ್ರತಿಭೆಗಳನ್ನು ಸೇರಿಸಿಕೊಂಡು ಯುವಕರಿಗೆ ಉಪಯುಕ್ತವಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸಲಹೆಯನ್ನು ನೀಡಿದರು.

3. ಶ್ರೀ ಪ್ರಕಾಶ್‌ರವರು ಯುವಕರಿಗೆ ಆಕರ್ಷಣೀಯವಾದ ಐ.ಟಿ. ಕುರಿತು ತರಬೇತಿ, ವೃತ್ತಿಪರ ಶಿಕ್ಷಣಕ್ಕೆ ಅನುಕೂಲವಾಗುವಂತೆ ತರಬೇತಿ ಕಾರ್ಯಗಾರಗಳು, ವೃತ್ತಿಪರ ಶಿಕ್ಷಣಕ್ಕೆ ಸಹಕಾರಿಯಾಗುವ ತರಗತಿಗಳನ್ನು ಏರ್ಪಡಿಸಬಹುದು ಎಂಬ ಸಲಹೆಯನ್ನು ಕೊಡುತ್ತಾ ಅಂತಹ ತರಬೇತಿಯನ್ನು ಕೊಟ್ಟು ಸಂಪನ್ಮೂಲ ವ್ಯಕ್ತಿಗಳನ್ನು ಏರ್ಪಡಿಸಲು ಸಹಕರಿಸುವುದಾಗಿ ಹೇಳಿದರು.

4. ಯುವಕರನ್ನು ಕಾರ್ಯಕಾರಿ ಸಮಿತಿಗೆ ಅಳವಡಿಸಿಕೊಂಡು ಅವರ ಪ್ರತಿಭೆಗಳನ್ನು ಸಮುದಾಯದ ಏಳಿಗೆಗೆ ಬಳಸಿಕೊಳ್ಳಬೇಕೆಂದು ಒಬ್ಬ ಮಾನ್ಯ ಸದಸ್ಯರು ಸಲಹೆಯನ್ನಿತ್ತರು.

5. ಪ್ರೊ. ನರಸಿಂಹಶಾಸ್ತ್ರಿಗಳು ಒಂದು ಉತ್ತಮ ಸಲಹೆಯನ್ನಿತ್ತರು: ಹೆಚ್ಚಿನ ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುವುದರ ಜೊತೆಗೆ ಹಲವು ಸಾಮಾನ್ಯ ಶ್ರೇಣಿಯ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಪರಿಗಣಿಸಿ ಪ್ರೋತ್ಸಾಹ ನೀಡಬೇಕೆಂತಲೂ, ಹಾಗೂ ಸ್ವಲ್ಪ ಶಿಕ್ಷಣ ಸಹಾಯ ಬೇಕಾಗಿರುವ ಅಂದರೆ ಪಾಠ ಪ್ರವಚನಗಳಲ್ಲಿ ಸ್ವಲ್ಪ ದುರ್ಬಲರಾಗಿರುವವರಿಗೆ

ತರಗತಿಗಳನ್ನು ಏರ್ಪಡಿಸಿ ಸಹಾಯ ಮಾಡಬೇಕಾಗಿದೆಯೆಂತಲೂ, ಇದು ಬಹಳ ಅರ್ಥಪೂರ್ಣವಾಗಿರುತ್ತದೆ ಎಂತಲೂ ಸಲಹೆಯನ್ನಿತ್ತರು.

6. ಹಿರಿಯ ಸದಸ್ಯರಾದ ಶ್ರೀ ವೆಂಕಟರಮಣಯ್ಯನವರು ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟರು.

- ಪ್ರತಿವರ್ಷ ವರ್ಷದ ಸರ್ವಸದಸ್ಯ ಸಭೆಯನ್ನು ಕಡ್ಡಾಯವಾಗಿ ಮಾಡಲೇಬೇಕು ಎಂದು ಸಲಹೆ ಮಾಡಿದರು.
- ಆದಾಯ ಮತ್ತು ವೆಚ್ಚದ ಮಾಹಿತಿಯನ್ನು ಸಭೆಗೆ ವಿವರವಾಗಿ ತಿಳಿಸಬೇಕಾದುದು ಕಡ್ಡಾಯ ಎಂದರು.
- ಸಭೆಯಿಂದ ಪಡೆದ ಸಲಹೆಗಳನ್ನು ಕಾರ್ಯಗತ ಮಾಡಿದ ವಿವರಗಳನ್ನು ಮುಂದಿನ ಸಭೆಗೆ ವಿವರಿಸಬೇಕಾದುದು ಅವಶ್ಯಕ ಎಂದರು.
- ಮೂರು ತಿಂಗಳಿಗೆ ಒಮ್ಮೆಯಾದರೂ ಒಂದು ಕಾರ್ಯಕ್ರಮವನ್ನು ಏರ್ಪಡಿಸಬೇಕು ಮತ್ತು ಹೊರನಾಡಿನಲ್ಲಿ ಇಂತಹ ಸಂಸ್ಥೆಗಳಲ್ಲಿ ಉತ್ತಮಸೇವೆ ಮಾಡಿರುವವರನ್ನು ಗುರ್ತಿಸಿ ಅವರನ್ನು ಸನ್ಮಾನಿಸುವ ಪರಿಪಾಠವನ್ನು ಬೆಳೆಸಿಕೊಳ್ಳುವುದು ಸೂಕ್ತ ಎಂದರು.
- ಬೆಂಗಳೂರು ನಗರದಲ್ಲಿ, ಹಾಗೂ ರಾಜ್ಯದ ಬೇರೆ ಬೇರೆಯ ಜಿಲ್ಲೆಗಳಲ್ಲಿ ನೆಲೆಸಿರುವ ಬಾಂಧವರನ್ನು ಗುರ್ತಿಸುವ ಕೆಲಸವನ್ನು ನಮ್ಮ ಸಂಘದ ಸದಸ್ಯರು ಮಾಡಬೇಕು. ಅವರೆಲ್ಲರನ್ನೂ ಸದಸ್ಯರನ್ನಾಗಿಸಿಕೊಳ್ಳಬೇಕಾದ ಪ್ರಯತ್ನವನ್ನು ತ್ವರಿತಗತಿಯಲ್ಲಿ ಮಾಡಬೇಕೆಂಬ ಸಲಹೆಯನ್ನಿತ್ತರು.
- ಮುಲಕನಾಡು ಸಮುದಾಯಕ್ಕೆ ಸಂದ ಎಲ್ಲಾ ಹಿರಿಯ-ಕಿರಿಯ, ಮತ್ತು ಹಿಂದಿನ–ಇಂದಿನ ಲೇಖಕರ ಕೃತಿಗಳನ್ನು ಸಂಗ್ರಹಿಸಿ ಒಂದು ಪುಸ್ತಕ ಪ್ರದರ್ಶನವನ್ನು ಏರ್ಪಡಿಸಿ ಎಂಬ ಸಲಹೆಯನ್ನಿತ್ತರು.
- ನಮ್ಮ ಸಮುದಾಯದವರು ಯಾರಾದರೂ ಅಂತ್ಯಸಂಸ್ಕಾರ/ವೈದ್ಯಕೀಯ ಖರ್ಚುಗಳ ವಿಷಯದಲ್ಲಿ ಅವಶ್ಯಕತೆ ಇರುವವರಿಗೆ ಶ್ರೀಯುತ ವೆಂಕಟರಮಣಯ್ಯನವರು ಒಂದು ಸಾವಿರ ರೂಪಾಯಿಗಳ (1,000/–) ಸಹಾಯ ಮಾಡುವರೆಂದು ಹೇಳಿದರು. ಅಂತಹವರು ಅವರನ್ನು ಸಂಪರ್ಕಿಸಬಹುದೆಂದು ಸಲಹೆ ಮಾಡಿದರು.

- ಲೆಕ್ಕ ಪರಿಶೋಧಕರನ್ನು ಸಂಪರ್ಕಿಸಿ ತೆರಿಗೆ ವಿನಾಯಿತಿಯ ದೃಢೀಕರಣ ಪತ್ರವನ್ನು ಸಂಬಂಧಪದಟ್ಟ ಅಧಿಕಾರಿಗಳ ಮೂಲಕ ಪಡೆಯಬೇಕು. ಇದರಿಂದ ಮೂಲದಲ್ಲಿ ತೆರಿಗೆಯನ್ನು (TDS) ಹಿಡಿಯುವುದನ್ನು ತಪ್ಪಿಸಬಹುದು.

7. ಸದಸ್ಯರಾದ ಶ್ರೀ ನಾರಾಯಣರಾವ್ ಮತ್ತು ಶ್ರೀ ವಿಶ್ವನಾಥ್‌ರವರು ಸಂಘವು ಮಾಡುತ್ತಿರುವ ಕಾರ್ಯವನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಕಾಲಕಾಲಕ್ಕೆ ವಿಳಾಸ ಬದಲಾವಣೆಯ ಮಾಹಿತಿಯನ್ನು ನೀಡಿದರೂ ಸಹ ಆಹ್ವಾನಪತ್ರಗಳು, ಸಂಘದ ಯಾವುದೇ ತಿಳುವಳಿಕೆಯ ಪತ್ರಗಳು ನಮ್ಮ ಕೈ ಸೇರುತ್ತಿಲ್ಲ. ಇದರಿಂದ ಆಸಕ್ತಿ ಇರುವ ನಾನು ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತೊಂದರೆಯಾಗಿದೆ. ಆದ್ದರಿಂದ ಈ ಕಡೆ ಗಮನಹರಿಸಬೇಕು ಎಂಬ ಸಲಹಯನ್ನಿತ್ತರು. ಈ ಸಲಹೆಗೆ ಹಲವಾರು ಸದಸ್ಯರು ಧ್ವನಿಗೂಡಿಸಿದರು.

8. ಸಂಘದ ಅಧ್ಯಕ್ಷರಾದ ಎಸ್. ಆರ್. ಸತ್ಯನಾರಾಯಣರವರು ಸದಸ್ಯರು ನೀಡಿರುವ ಸಲಹೆಗಳನ್ನು ಗೌರವಪೂರ್ವಕವಾಗಿ ಸ್ವೀಕರಿಸುತ್ತಾ, ಸಾಧ್ಯವಾದ ಎಲ್ಲಾ ಸಲಹೆಗಳನ್ನು ಅನುಷ್ಠಾನಗೊಳಿಸುವುದಾಗಿ ಭರವಸೆ ನೀಡಿದರು.

9. ಕಾರ್ಯಕಾರಿ ಸಮಿತಿ ಚುನಾವಣೆಯ, ಚುನಾವಣಾಧಿಕಾರಿಯಾದ ಕ್ಯಾಪ್ಟನ್ ರಾಮಮೂರ್ತಿಯವರು ಚುನಾವಣೆಯ ನಡಾವಳಿಗಳ ಕುರಿತು ವಿವರಿಸಿದರು. ಚುನಾವಣೆಯು ಅವಿರೋಧವಾಗಿ ನಡೆದುದರಿಂದ ಹದಿನೈದು ಜನರ ಕಾರ್ಯಕಾರಿಣಿ ಸಮಿತಿಯ ಸದಸ್ಯರ ಹೆಸರುಗಳನ್ನು ಘೋಷಿಸಿದರು.

**ಸಭೆ ವಂದನಾರ್ಪಣೆಯ ಮೂಲಕ ಮುಕ್ತಾಯವಾಯಿತು.**

# 12ನೇ ಸರ್ವ ಸದಸ್ಯರ ಸಭೆ
# ಸಂಘದ 2013-14ನೇ ಸಾಲಿನ ಸಂಕ್ಷಿಪ್ತ ವರದಿ

**ಸನ್ಮಾನ್ಯ ಸದಸ್ಯರೇ,**

ಮುಲಕನಾಡು ಮಹಾ ಸಂಘದ ಅಂಕಿ-ಅಂಶಗಳು, ಕಾರ್ಯ ಚಟುವಟಿಗಳು ಮತ್ತು ಮುಂದಿನ ಯೋಜನೆಗಳನ್ನೊಳಗೊಂಡ ಸಂಕ್ಷಿಪ್ತ ವರದಿಯನ್ನು ತಮ್ಮ ಅವಗಾಹನೆಗಾಗಿ ತರಲು ಹರ್ಷಿಸುತ್ತೇನೆ ಮತ್ತು ಇದರ ವಿಷಯವಾಗಿ ತಮ್ಮ ಸಲಹೆ ಹಾಗೂ ಸೂಚನೆಗಳನ್ನು ಅಹ್ವಾನಿಸುತ್ತೇನೆ.

ಮಹಾಶ್ರೇಷ್ಠ ದಾನಿಗಳು, ಶ್ರೇಷ್ಠದಾನಿಗಳು, ದಾನಿಗಳು, ಮಹಾ ಪೋಷಕರು, ಪೋಷಕರು, ಹಿತೈಷಿಗಳು ಮತ್ತು ಅಜೀವ ಸದಸ್ಯರು ಒಳಗೊಂಡಂತೆ ದಿನಾಂಕ 04-09-2014 ಅಂತೆ ಸಂಘದಲ್ಲಿ ಒಟ್ಟು 2397 ಸದಸ್ಯರುಗಳು ಇರುತ್ತಾರೆ. ಈ ವರ್ಷ 92 ಹೊಸ ಸದಸ್ಯರು ಸೇರ್ಪಡೆಯಾಗಿರುತ್ತಾರೆ. ಮಹಾಶ್ರೇಷ್ಠ ದಾನಿಗಳು 14, ಶ್ರೇಷ್ಠದಾನಿಗಳು 12, ದಾನಿಗಳು 18, ಮಹಾ ಪೋಷಕರು 67, ಪೋಷಕರು 54, ಹಿತೈಷಿಗಳು ಮತ್ತು ಸಾಮಾನ್ಯ ಸದಸ್ಯರು ಸೇರಿ 2232.

ಸಂಘವು ಇನ್ನೂ ಹೆಚ್ಚು ಸದಸ್ಯರನ್ನಾಗಿ ಮಾಡಲು ಪ್ರಯತ್ನಿಸುತ್ತಿದೆ. ಎಲ್ಲಾ ಮಾನ್ಯ ಸದಸ್ಯರುಗಳು ಈ ನಿಟ್ಟಿನಲ್ಲಿ ಕೈ ಜೋಡಿಸಬೇಕೆಂದು ಕೋರುತ್ತೇನೆ.

ಕಳೆದ ಒಂದು ವರ್ಷದಲ್ಲಿ ಸಂಘವು 11 ಬಾರಿ ಆಡಳಿತ ಮಂಡಳಿ ಸಬೆ ನಡೆಸಿ ಸಂಘದ ಚಟುವಟಿಕೆಗಳ ಬಗ್ಗೆ ಚರ್ಚಿಸಿತು.

ವಿದ್ಯಾರ್ಥಿವೇತನ ಮತ್ತು ಪ್ರತಿಭಾ ಪುರಸ್ಕಾರ ಕಳೆದ ಹಲವು ವರ್ಷಗಳಿಂದ ನಮ್ಮ ಸಂಘವು ಪೂರ್ವ ಪ್ರಾಥಮಿಕ, ಪ್ರೌಢಶಿಕ್ಷಣ, ಪದವಿಪೂರ್ವ, ಡಿಪ್ಲೋಮೋ, ಪದವಿ ಶಿಕ್ಷಣಗಳಾದ ಬಿ.ಎ., ಬಿ.ಕಾಂ., ಬಿ.ಎಸ್.ಸಿ., ಬಿ.ಬಿ.ಎಂ., ಎಂ.ಎ., ಎಂ.ಕಾಂ., ಎಂ.ಎಸ್.ಸಿ., ಎಂ.ಬಿ.ಎ., ಎಂ.ಬಿ.ಬಿ.ಎಸ್., ಬಿ.ಇ., ಮತ್ತು ವೇದಪಾಠ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ನೀಡುತ್ತಾ ಬಂದಿದೆ.

ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಅವರ ಪ್ರತಿಭೆಯನ್ನು ಗುರುತಿಸಿ ಸೂಕ್ತ ನಗದು ಬಹುಮಾನ, ನೆನಪಿನ ಕಾಣಿಕೆ ಮತ್ತು ಯೋಗ್ಯತಾ ಪತ್ರವನ್ನು ನೀಡಲಾಗುತ್ತಿದೆ.

ಸಮಾಜದ ಗಣ್ಯ ವ್ಯಕ್ತಿಗಳನ್ನು ಗುರುತಿಸಿ ಅವರ ಸಾಧನೆಗಳನ್ನು ಬಾಂಧವರಿಗೆ ತಿಳಿಸುವ ಸಲುವಾಗಿ ಅಂತಹ ವ್ಯಕ್ತಿಗಳಿಗೆ ಪ್ರತಿ ವರ್ಷವೂ ಸನ್ಮಾನ ಕಾರ್ಯಕ್ರಮ ನಡೆಯುತ್ತಾಬಂದಿದೆ.

ವಿದ್ಯಾರ್ಥಿವೇತನ ನಿಧಿಯನ್ನು ಅಭಿವೃದ್ಧಿ ಪಡಿಸಿ, ಅದರಿಂದ ಬರುವ ಆದಾಯದಿಂದಲೇ ವಿದ್ಯಾರ್ಥಿವೇತನ ಮತ್ತು ಪ್ರತಿಭಾ ಪುರಸ್ಕಾರ ನೀಡುವುದು ನಿರಂತರವಾಗಿರಬೇಕೆಂದು ಕಾರ್ಯಕಾರಿ ಸಮಿತಿಯ ಆಶಯ. ಆದುದರಿಂದ ಮಾನ್ಯ ಸದಸ್ಯರು ಹೆಚ್ಚು ಹಣವನ್ನು ನಿಧಿಗೆ ಸೇರಿಸಲು ಮತ್ತು ನಿಧಿಯಲ್ಲಿ ಸಾಕಷ್ಟು ಹಣ ಶೇಖರವಾಗುವವರೆಗೆ ವಾರ್ಷಿಕ ಧನ ಸಂಗ್ರಹಣೆ, ಇತ್ಯಾದಿಗಳಲ್ಲಿ ಇನ್ನೂ ಸಹಾಯ ಮಡಬೇಕೆಂದು ಕಾರ್ಯಕಾರಿ ಸಮಿತಿಯ ಪರವಾಗಿ ಕೋರುತ್ತೇನೆ. ಇದೇ ಸಮಯದಲ್ಲಿ ಈ ವಿಷಯದಲ್ಲಿ ಈಗಾಗಲೇ ಧನಸಹಾಯ ಮಾಡಿರುವ ದಾನಿಗಳಿಗೂ ಸಹಕರಿಸಿದ ಸಕಲ ಸದಸ್ಯರಿಗೂ ಅನಂತಾನಂತ ವಂದನೆಗಳು.

ವಿದ್ಯಾರ್ಥಿವೇತನದ ಸದುಪಯೋಗ ಪಡೆದುಕೊಂಡ ವಿದ್ಯಾರ್ಥಿಗಳು ತಮಗೆ ಉದ್ಯೋಗ ದೊರೆತನಂತರ ಸಂಘದ ಸತ್ಕಾರ್ಯಕ್ಕೆ ತಮ್ಮ ಕೈಲಾದ ದೇಣಿಗೆಯನ್ನು ನೀಡಲು ಪ್ರೇರೇಪಿಸಬೇಕೆಂದು ಸದಸ್ಯರಲ್ಲಿ ನಾನು ವಿನಂತಿಸುತ್ತೇನೆ.

ವಿದ್ಯಾರ್ಥಿವೇತನ ಪಡೆದುಕೊಂಡ ವಿದ್ಯಾರ್ಥಿಗಳಲ್ಲಿ ಉದ್ಯೋಗ ಪಡೆದ ನಂತರ ಪ್ರತಿ ವರ್ಷ ಶ್ರೀ ಚಂದ್ರಶೇಖರ್ ತೇಜಸ್ವಿಯವರು "ವಿದ್ಯಾರ್ಥಿ ವೇತನದ ವಿದ್ಯಾನಿಧಿಗೆ" ದೇಣಿಗೆ ನೀಡುತ್ತಾ ಬಂದಿದ್ದಾರೆ. ಹಾಗೆಯೇ ಉದ್ಯೋಗಕ್ಕೆ ಸೇರಿದ ಮೊದಲ ತಿಂಗಳ ಸಂಬಳದಲ್ಲಿಯೇ ಕುಮಾರಿ. ರಶ್ಮಿಯವರು ದೇಣಿಗೆ ನೀಡಿರುವುದು ಆದರ್ಶ ಪ್ರಾಯರಾಗಿರುತ್ತಾರೆ. ಇಂತಹವರನ್ನು ಅನುಕರಣೆಮಾಡಬೇಕೆಂದು ಫಲಾನುಭವಿ ವಿದ್ಯಾರ್ಥಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಮುಲಕನಾಡು ಸಂಘವು Income Tax Act 1961 ರ ಪ್ರಕಾರ ಸಂಘದ ಅಂಗೀಕಾರಕ್ಕಾತಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿದ್ದು, ಈ ಅಂಗೀಕಾರದಿಂದ ಟ್ರಸ್ಟ್, ಸಂಘ–ಸಂಸ್ಥೆಗಳಿಗೆ ಸಿಗುವ Income Tax Exemption ನ ಸೌಲಭ್ಯವನ್ನು ನಮ್ಮ ಸಂಘವು ಪಡೆದುಕೊಳ್ಳಬಹುದು. ಈ ಪ್ರಕಾರ ಸಂಘವು Recogonition ಪಡೆದ ನಂತರ Income Tax Return File ಮಾಡಿ TDS Refund ಪಡೆಯಬಹುದು. ಮತ್ತೊಂದು ಮುಖ್ಯವಾದ ವಿಷಯವೇನೆಂದರೆ Income Tax Department ಹಿರಿಯ ಅಧಿಕಾರಿಗಳೊಬ್ಬರು ಈ ನಿಟ್ಟಿನಲ್ಲಿ ನಮಗೆ ಸಹಾಯ ಹಸ್ತ ನೀಡುತ್ತೇನೆಂದು ಭರವಸೆ ನೀಡಿರುವುದು ನಮಗೆಲ್ಲ ಅತ್ಯಂತ ಸಂತಸದ ವಿಷಯವಾಗಿದೆ.

ವಿದ್ಯಾ ಸೇವಾ ಟ್ರಸ್ಟ್ ಈಗಾಗಲೇ ನ್ಯಾಯಾಲಯದಲ್ಲಿ "ಗೀರ್ವಾಣ ಭವನ"ದ ಕಟ್ಟಡವನ್ನು ತಮ್ಮ ಸ್ವಾಧೀನದಲ್ಲೇ ಇರಬೇಕೆಂದು ದಾವೆ ಹಾಕಿದೆ. ತೀರ್ಪು ತಮ್ಮಪರವಾಗಿ ಆದರೆ ಸಂಘಕ್ಕೆ ಈ ಕಟ್ಟಡವನ್ನು ರೂ. 45 ಲಕ್ಷಕ್ಕೆ ಕೊಡುವುದಾಗಿ ಲಿಖಿತದ ಮೂಲಕ ಒಪ್ಪಂದ ಮಡಿಕೊಂಡಿದ್ದರೂ, ಈಗಿನ ಧಾರಣೆಗಳ ಹೆಚ್ಚಳದಿಂದಾಗಿ ರೂ. 75 ಲಕ್ಷ ಕೊಡಬೇಕಾಗಿ ಒತ್ತಾಯಿಸುತ್ತಿದ್ದಾರೆ. ಆದರೆ ಗೌರವಾನ್ವಿತ ನ್ಯಾಯಾಲಯದ ತೀರ್ಪು ಇವರಿಗೆ ವಿರೋಧವಾಗಿರುವ, ಕಾರಣ ಉಚ್ಚನ್ಯಾಯಾಲಯಕ್ಕೆ ಹೋಗುವುದಾಗಿ ವಿದ್ಯಾ ಸೇವಾ ಟ್ರಸ್ಟ್ ನಿರ್ಧರಿಸಿದೆ. ಈ ಎಲ್ಲದರ ನಡುವೆ ಈ ಕಟ್ಟಡ ಸಿಗುವುದು ದುರ್ಲಭ. ಆದ ಕಾರಣ ಸಂಘವು ಖಾಸಗೀ ನಿವೇಶನ ಅಥವಾ ಕಟ್ಟಡವನ್ನು ಪಡೆಯಲು ನಿರ್ಧರಿಸಿದೆ. ಸ್ವಂತ ಇಟ್ಟಡ ಇಲ್ಲದ ಕಾರಣ ಸಂಘವು ಯೋಜಿಸಿದ್ದ ವೇದಪಾಠಶಾಲೆ ವಿದ್ಯಾರ್ಥಿನಿಲಯ (ಹಾಸ್ಟೆಲ್) ಮುಂತಾದ ಸೌಕರ್ಯಗಳನ್ನು ಒದಗಿಸಲು ಅಸಾಧ್ಯವಾಗಿದೆ.

ಖಾಸಗಿ ನಿವೇಶನ ಅಥವಾ ಕಟ್ಟಡ ಪಡೆಯಲು ಬಹಳ ಹೆಚ್ಚಿನ ಮೊತ್ತ ಬೇಕಾಗಿರುವುದರಿಂದಲೂ ಸಂಘದ ಕಟ್ಟಡಕ್ಕೆ ಸಾಕಷ್ಟು ಹಣ ಇಲ್ಲದಿರುವುದರಿಂದಲೂ ಎಲ್ಲ ಸದಸ್ಯರು ಉದಾರ ಮನಸ್ಸಿನಿಂದ ದೇಣಿಗೆಯನ್ನು ನೀಡುವುದಲ್ಲದೆ, ದಾನಿಗಳಿಂದ ಹಣವನ್ನು ಸಂಗ್ರಹಿಸುವ ಕೆಲಸದಲ್ಲಿ ಯುದ್ಧದ ಭರದಲ್ಲಿ ಪ್ರಯತ್ನಿಸಬೇಕೆಂದು ನನ್ನ ಕಳಕಳಿಯ ವಿನಂತಿ.

ಈ ನಿಟ್ಟಿನಲ್ಲಿ ಸಂಘವು ಒಂದು ನಿವೇಶನವನ್ನು ಈಗಾಗಲೇ ಗುರುತಿಸಿ, ಕಾನೂನು ಸಲಹೆಗಾಗಿ ಪತ್ರಗಳನ್ನು ವಕೀಲರಿಗೆ ಕೊಟ್ಟು ಅವರ ಅಭಿಪ್ರಾಯಕ್ಕಾಗಿ ಕಾಯುತ್ತಿದ್ದೇವೆ.

2012-13ನೇ ಮತ್ತು 2013-14ನೇ ಸಾಲಿನ ವಿದ್ಯಾರ್ಥಿವೇತನವನ್ನು 300 ವಿದ್ಯಾರ್ಥಿಗಳಿಗೆ ಒಟ್ಟು ರೂ. 4,94,000 ಮೊತ್ತದಷ್ಟು ವಿತರಿಸಲಾಯಿತು. ಈ ವರ್ಷದ ವಿಶೇಷವೆಂದರೆ ಪ್ರತಿ ವರ್ಷವೂ ಬ್ಯಾಂಕಿನಲ್ಲಿ ಠೇವಣಿ ಇಟ್ಟ ಬಡ್ಡಿಯ ಹಣ ಮತ್ತು ದಾನಿಗಳು ನೀಡುತ್ತಿರುವ ಮೊತ್ತದಲ್ಲಿ ವಿದ್ಯಾರ್ಥಿವೇತನ ವಿತರಿಸಲಾಗುತ್ತಿತ್ತು. ಆದರೆ ಈ ಬಾರಿ ದಾನಿಗಳು ನೀಡಿದ ಉದಾರ ದೇಣಿಗೆಯಿಂದಾಗಿ ಬ್ಯಾಂಕಿನಿಂದ ಬಡ್ಡಿಯ ಹಣವನ್ನು ತೆಗೆದುಕೊಳ್ಳದೆ ದಾನಿಗಳು ಕೊಟ್ಟ ಹಣದಿಂದ ವಿದ್ಯಾರ್ಥಿವೇತನ ವಿತರಿಸಲಾಯಿತು. ಇದಕ್ಕೆ ಸಹಕರಿಸಿದ ಎಲ್ಲಾ ದಾನಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

## 2013 ಸೆಪ್ಟಂಬರ್ ತಿಂಗಳಿಂದ 2014 ಜೂನ್ ತಿಂಗಳವರೆಗೆ ನಡೆದ ವಿಶೇಷ ಕಾರ್ಯಕ್ರಮಗಳು

ದಿನಾಂಕ 15-09-2013 ರಂದು ಕೆ.ಆರ್. ವೃತ್ತದ ಎಸ್.ಜೆ. ಪಾಲಿಟೆಕ್ನಿಕ್ ಸಭಾಂಗಣದಲ್ಲಿ ಸರ್. ಎಂ. ವಿಶ್ವೇಶ್ವರಾಯರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀ ಕಟ್ಟೆ ಸತ್ಯನಾರಾಯಣ ಮತ್ತು ಉಪಮಹಾಪೌರರಾದ ಶ್ರೀಮತಿ ಇಂದಿರಾರವರು ಮತ್ತು ಲೋಕಸಭಾ ಸದಸ್ಯರಾದ ಶ್ರೀ ಅನಂತಕುಮಾರ್ ರವರು ಭಾಗವಹಿಸಿದ್ದರು.

ದಿನಾಂಕ 01-12-2013 ರಂದು ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಮಿಥಿಕ್ ಸೊಸೈಟಿಯಲ್ಲಿ ಯುವ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಡಾ॥ಗುರುರಾಜ ಕರ್ಜಗಿಯವರು ವಹಿಸಿದ್ದರು. ಯುವಜನರ ಜ್ಞಾನರ್ಜನೆಗಾಗಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಸಹಕಾರಿಯಾಯಿತು.

ಎ) ಬಿ.ಆರ್. ರವಿಯವರಿಂದ ಜ್ಞಾನವಿಕಾಸದ ವಿಷಯವಾಗಿ ವಿಷಯಮಂಡನೆ.

ಬಿ) ವಾಸ್ತುತಜ್ಞ ಶ್ರೀ ನಿರಂಜನ ಬಾಬುರವರಿಂದ ಪ್ರಸ್ತುತ ಕಾಲದಲ್ಲಿ ವಾಸ್ತುವಿನ ಬಗ್ಗೆ ವಿವರಣೆ.

ಸಿ) ಶ್ರೀ ಎಂ.ಜಿ. ರಾಜೇಂದ್ರ ಹೆಗಡೆಯವರಿಂದ ಉದ್ಯೋಗಮಾಹಿತಿ ವಿವರ.

ದಿನಾಂಕ 01-01-2014ರಂದು ನಮ್ಮ ಸಂಘದ ಸಭಾಂಗಣದಲ್ಲಿ ಸುಮಾರು ಒಂದು ನೂರು ಜನ ಋತ್ವಿಕರ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಪುರೋಹಿತ ವರ್ಗಕ್ಕೆ ಇರುವ ಸಮಸ್ಯೆಗಳಿಗೆ ಸ್ಪಂದಿಸಿದ ಅಧ್ಯಕ್ಷರು ತಮಗೆ ಸಾಧ್ಯವಾಗುವ ಸಹಾಯ, ಸಹಕಾರ ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಸಂಘದ ವತಿಯಿಂದ ವಿಪ್ರ ಸಮಾಜಕ್ಕೆ ಮಹತ್ತರವಾದ ಸೇವ ಸಲ್ಲಿಸುತ್ತಿರುವ ಹಿರಿಯ 3 ಜನ ಋತ್ವಿಕರನ್ನು ಸನ್ಮಾನಿಸಲಾಯಿತು.

ದಿನಾಂಕ 26-01-2014 ರಂದು ಶಂಕರಮಠದ ಆವರಣದಲ್ಲಿ ಶ್ರೀ ತ್ಯಾಗರಾಜರ ಆರಾಧನೆಯನ್ನು ಹಮ್ಮಿಕೊಂಡಿತು. ಸಂಸತ್ ಸದಸ್ಯರಾದ ಶ್ರೀ ಅನಂತಕುಮಾರ್ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದರು, ಪ್ರಸಿದ್ಧ ಕರ್ನಾಟಕ ಸಂಗೀತಗಾರರಾದ ವಿದ್ವಾನ್ ಆರ್. ಕೆ. ಶ್ರೀಕಂಠನ್‌ರವರು ಸಹ ಸಮಾರಂಭದಲ್ಲಿ ಭಾಗವಹಿಸಿದ್ದರು. ಕರ್ನಾಟಕದ ಖ್ಯಾತ ಸಂಗೀತಗಾರರು, ವಿಶಿಷ್ಟ ಸಾಂಪ್ರದಾಯಿಕ ಕುಟುಂಬದಿಂದ ಬಂದವರಾಗಿದ್ದ ಶ್ರೀ ಆರ್. ಕೆ. ಶ್ರೀಕಂಠನ್‌ರವರು ದೇಶದಲ್ಲಿ ಮಾತ್ರ ಪ್ರದರ್ಶನವಲ್ಲದೇ ಹೊರದೇಶದಲ್ಲೂ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸುಮಾರು 30 ಜನ

ಕಲಾವಿದರಿಗೆ ಶ್ರೀಯುತರು ಶಾಲು ಹೊದಿಸಿ, ಫಲಪುಷ್ಪಗಳನ್ನು ನೀಡಿದರು. ಈ ಕಾರ್ಯಕ್ರಮವನ್ನು ಸಮಿತಿಯ ಸದಸ್ಯರಾದ ಡಾ॥ ನಾಗಲಕ್ಷ್ಮಿಯವರ ಕುಟುಂಬದವರು ಪ್ರಾಯೋಜಿಸಿದ್ದರು.

ಪ್ರತಿ ವರ್ಷದಂತೆ ಈ ವರ್ಷವೂ ಸಮಾಜಕ್ಕೆ ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ದಿನಾಂಕ 02-03-2014 ರಂದು ಸನ್ಮಾನಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸುತ್ತಿರುವ ಶ್ರೀ ಎಂ.ಕೆ.ಲಕ್ಷ್ಮಣ ಶಾಸ್ತ್ರಿಯವರು, ಸಂಗೀತ, ಕಲೆ, ನಾಟಕ ಕ್ಷೇತ್ರಗಳಲ್ಲಿ ಮನೆ ಮಾತಾಗಿರುವ ಶ್ರೀಮತಿ ಭಾರ್ಗವಿ ನಾರಾಯಣ್ ಅವರು ಈ ವರ್ಷದ ಸನ್ಮಾನಿತರು. ಮಹಿಳೆಯರಿಗೆ ಪ್ರಾಶಸ್ತ್ಯ ಕೊಟ್ಟಿರುವುದಕ್ಕೆ ಮುಖ್ಯ ಅತಿಥಿಗಳಾದ ಪ್ರೊ॥ಎಸ್.ಆರ್. ಲೀಲಾ ಅವರು ಸಂಘವನ್ನು ಅಭಿನಂದಿಸಿದರು. ಅಂದೇ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ವಿದ್ಯಾರ್ಥಿವೇತನ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಲೋಕಕಲ್ಯಾಣಕ್ಕಾಗಿ ಸಂಘದ ವತಿಯಿಂದ ಶ್ರೀಸುದರ್ಶನ ಹೋಮ ಕಾರ್ಯಕ್ರಮವನ್ನು ದಿ. 13-04-2014 ರಂದು ನಡೆಸಲಾಯಿತು. ಸಂಘದ ಕಾರ್ಯಕರ್ತರಾದ ಶ್ರೀ ನಾಗೇಂದ್ರ ದಂಪತಿಗಳು ಯಾಜಮಾನ್ಯವನ್ನು ವಹಿಸಿದ್ದರು. ಅನೇಕ ಸದಸ್ಯರು ಕುಟುಂಬ ಸಮೇತ ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ತಾರೀಖು 22-06-2014 ರಂದು ಸಂಘವು ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಸತತ ಆರನೇ ಬಾರಿಗೆ ಆಯ್ಕೆಯಾಗಿ ಬಂದು ರಾಸಾಯನಿಕ ಮತ್ತು ಗೊಬ್ಬರ ಖಾತೆಯನ್ನು ನಿರ್ವಹಿಸುತ್ತಿರುವ ನಮ್ಮ ಸಮುದಾಯದ ಮುಖಂಡರಾದ ಸನ್ಮಾನ್ಯ ಶ್ರೀ ಹೆಚ್.ಎನ್. ಅನಂತಕುಮಾರ್ ಅವರನ್ನು ಬೆಂಗಳೂರಿನ ಗಾಯನ ಸಮಾಜದಲ್ಲಿ ಸನ್ಮಾನಿಸಲಾಯಿತು. ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಡಾ॥ ಶ್ರೀ ರಾಮಾ ಜೋಯಿಸ್‌ರವರು ಅಖಿಲ ಭಾರತ ಬ್ರಾಹ್ಮಣ ಒಕ್ಕೂಟದ ಅಧ್ಯಕ್ಷರಾದ ಶ್ರೀ ಬನ್ವಾರಿಲಾಲ್ ಶರ್ಮರವರು ಮತ್ತು ಚಲನಚಿತ್ರ ನಟರಾದ ಶ್ರೀ ಶ್ರೀಧರ್‌ರವರು ಆಗಮಿಸಿದ್ದರು. ವಿದುಷಿ ಶ್ರೀಮತಿ ನಾಗವಲ್ಲಿ ನಾಗರಾಜ್‌ರವರ ಸಂಗೀತದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ ವೇದಘೋಷ, ಪ್ರಾರ್ಥನೆ ಹಾಗೂ ಗಣ್ಯರು ದೀಪ ಬೆಳಗುವುದರೊಂದಿಗೆ ಕಾರ್ಯಕ್ರಮ ಮುಂದುವರೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಬಿ.ಎಲ್. ನಾಗೇಂದ್ರಪ್ರಸಾದ್ ರವರು ಸ್ವಾಗತ ಭಾಷಣ ಮಾಡಿದರು. ಡಾ॥ ಶ್ರೀ ರಾಮಾ ಜೋಯಿಸ್‌ರವರು ರಕ್ತದಾನ ಶಿಬಿರವನ್ನು ಉದ್ಘಾಟಿಸಿದರು. ಈ ಶಿಬಿರದಲ್ಲಿ ಸಂಗ್ರಹಿಸಲಾದ ರಕ್ತವನ್ನು ರಾಷ್ಟ್ರೋತ್ಥಾನ ಪರಿಷತ್ತಿಗೆ ನೀಡಲಾಯಿತು. ಶ್ರೀ ಅನಂತ್‌ಕುಮಾರ್‌ರವರು ಸಂಘದ ವೆಬ್‌ಸೈಟಿಗೆ ಚಾಲನೆ ನೀಡಿದರು. "ಮಕರಂದ", ತ್ರೈ-ಮಾಸಿಕ ಪತ್ರಿಕೆ ಮತ್ತು ಸದಸ್ಯರ ಗುರುತಿನ ಚೀಟಿ ಬಿಡುಗಡೆಯನ್ನು ಡಾ॥ ಶ್ರೀ ರಾಮಾ ಜೋಯಿಸ್‌ರವರು

ನೆರವೇರಿಸಿದರು. ಶ್ರೀ ಹೆಚ್. ಎನ್. ಅನಂತಕುಮಾರ್ ಅವರಿಗೆ ಸಂಘದ ಸ್ವಂತ ನಿವೇಶನ ಕ್ರಯಕರಾರು ಪತ್ರದ ಹಸ್ತಾಂತರ ಮಾಡಲಾಯಿತು. ಶ್ರೀ ಹೆಚ್. ಎನ್. ಅನಂತಕುಮಾರ್ ಅವರು ಎಲ್ಲಾ ಮುಖ್ಯ ಅತಿಥಿಗಳಿಗೆ ಗೌರವಪೂರ್ವಕವಾಗಿ ಪರಂಪರಾಗತ ಮೈಸೂರು ಪೇಟದೊಂದಿಗೆ ಸನ್ಮಾನಿಸಿದರು. ತದ ನಂತರ ಸಮಾರಂಭದ ಕೇಂದ್ರ ಬಿಂದುವಾದ ಶ್ರೀ ಹೆಚ್.ಎನ್. ಅನಂತಕುಮಾರ್ ಅವರಿಗೆ ಡಾ|| ಶ್ರೀ ರಾಮಾ ಜೋಯಿಸ್‌ರವರು ಒಲುಮೆಯಿಂದ ಸನ್ಮಾನಿಸಿ ಕೆಲವು ಹಿತ – ವಚನಗಳನ್ನು ನೀಡಿದರು. ಶ್ರೀ ಹೆಚ್.ಎನ್. ಅನಂತಕುಮಾರ್ ಅವರು ಕೃತಜ್ಞತೆ ಸಲ್ಲಿಸಿ ಸಂಘದ ನಿವೇಶನಕ್ಕೆ ಸಂಘದ ಅಭಿವೃದ್ಧಿ ನಿಧಿಯಿಂದ ರೂ. ಹತ್ತು ಲಕ್ಷ ಕೊಡುಗೆಯನ್ನು ಘೋಷಿಸಿದರು. ಸಂಘದ ಉಪಾಧ್ಯಕ್ಷರಾದ ಶ್ರೀ ವೈ.ಎನ್. ಶರ್ಮರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ನಮ್ಮ ಎಲ್ಲಾ ಕಾರ್ಯಕ್ರಮಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಹನಿಯರಿಗೂ ಅನಂತಾನಂತ ವಂದನೆಗಳು, ಈ ಸಹಾಯ ಹಸ್ತವನ್ನು ಮುಂದಿನ ವರ್ಷಗಳಲ್ಲಿಯು ಸಹ ಮುಂದುವರೆಸಬೇಕಾಗಿ ಪ್ರಾರ್ಥನೆ.

**ವಂದನೆಗಳು**

**ಬಿ.ಆರ್. ರವಿ.**

Sd/-

**ಕಾರ್ಯದರ್ಶಿ**

**ಮುಲಕನಾಡು ಮಹಾಸಂಘ**